ಊಟಮಾಡುವಂತಾಗಿದ್ದು ಅಂದ ಹನಿಗಣ್ಣಾಗಿ. ಅಲ್ಲಿಂದ ಕತ್ಲಗಾನಿಗೆ ಇಪ್ಪತ್ತು ನಿಮಿಷ. ನಡೆದೆ ಹೊರಟರು.

'ಸಾವಕ್ಕ ಕರುದುಕೊಟ್ಟ ಭಜಿ ರುಚಿಯಾಗಿತ್ತ?' ಎದುರುಗೊಂಡ ಹೆಂಡತಿಯ ಸ್ವರಕ್ಕೆ ಕೆಂಬಳ್ಳಿ ಪರಮಯ್ಯ, ಯಾವ ಮೇಘದೂತ ಇವಳಿಗೆ ಸಂದೇಶ ಕೊಟ್ಟ ಅಂತ ಬೆಚ್ಚಿಬಿದ್ದರು. 'ನಂದೂ ಸ್ವಲ್ಪ ಕೇಳತ್ಯಾ ಬಾಗೀರ್ತಿ? ಅಂಗಡಿ ಹಾಕಿದ್ದು ಮಾಲ್ಕಿ ಜಾಗವ ಅಂತ ನೋಡಕ್ಕೆ ಅಲ್ಲಿ ಹೋಗಿದ್ನೆ ಮಾರಾಯ್ತಿ. ವರಾತ ಮಾಡಿದ. ಪೇಟೆಲ್ಲೆಲ್ಲ ನೀನು ತಿಂದಿಲ್ವನೆ? ಸಾವಕ್ಕ ಕರೀತಿದ್ದದ್ದು ಅಂತ ನಂಗೇನು ಗೊತ್ತಿತ್ತ?' ಅಂಗಿ ಬಿಚ್ಚುತ್ತ ಒಳಕೋಣೆಗೆ ಹೋಗುತ್ತಿದ್ದವರಿಗೆ, 'ಕತ್ಲಗಾನ ರಾಯರೂ ತಿಂತಿದ್ದರಂತೇ... ನಿಮಗೆ ಗಂಡಸರಿಗೆ ಮನೇದು ಯಾವತ್ತಾದ್ರೂ ರುಚಿ ಅನಸ್ತದಾ?' ಹಿಂಬಾಲಿಸಿದ ಸ್ವರಕ್ಕೆ, 'ಕತ್ಲಗಾನವ್ರು ನಿಂಗೇ ಸೋದರ ಸಂಬಂಧ. ನೀನೇ ಕೇಳ್ಕ' ಅಂತ ಗೊಣಗಿದ್ದು ಬಾಗೀರ್ತಕ್ಕನಿಗೆ ಕೇಳಿಸಲಿಲ್ಲ. ಅಲ್ಲಿ ಕತ್ಲಗಾನಲ್ಲಿ ಮುಕುಂದರಾಯರು ಪಾಟೀಸವಾಲಿಗೆ ಸಿಲುಕಿದ್ದರು. 'ಕೆಂಬಳ್ಳಿಯಿಂದ ಬಾಗೀರ್ತತ್ತಿಗೆ ಫೋನು ಈಗಷ್ಟೆ ಬಂದಿತ್ತು. ವಾದಮಾಡದು ಬ್ಯಾಡ...' ಇಂತದಕ್ಕಾದರೆ ಸಿಗ್ನಲ್ ತೊಂದರೆ ಇರೋದೇ ಇಲ್ವಲ್ಲ ಅಂತ ಅಚ್ಚರಿಪಡುತ್ತ, 'ಹೋಗ್ಲಿ ಬಿಡೆ, ಅವರವರ ಜೀವನಕ್ಕೊಂದು ಹಾದಿ ಅಂತ ಬರೆದಿರ್ತದೆ ವಿಧಿ. ನಾನೇನು ದಿನಾ ಹೋಗತೇನ?' ಅಂದರು.

ಜನರ ಬಾಯಲ್ಲಿ ಅಕ್ರಾಂ, 'ಅಕ್ರಾಮು', 'ಅಕ್ರಾಮಣ್ಣ' ಆದ. ಗುಡಿಸಲಿಗೆ ವಿದ್ಯುತ್ ಇರಲಿಲ್ಲ. ಬಸ್ಸುಗಳೆಲ್ಲ ಹೋದಮೇಲೂ ರಾತ್ರಿ ಏಳೆಂಟು ಗಂಟೆಯವರೆಗೆ ಚಿಮಣಿಎಣ್ಣೆ ದೀಪದ ಮಿಣಿಮಿಣಿ ಬೆಳಕಲ್ಲಿ ಅಂಗಡಿಯಲ್ಲಿ ಸರಿರಾತ್ರಿವರೆಗೂ ನಾಕಾರು ಜನ ಮುತ್ತಿರುತ್ತಿದ್ದರು. ಯಾವುದೊ ಸಂದರ್ಭದಲ್ಲಿ ಸಿಕ್ಕಾಗ ಊರ ಹೆಂಗಸರು, 'ಸಾವಿ, ಕತ್ತಲಾದಮೇಲೆ ಅಲ್ಲಿ ಏನು ವ್ಯಾಪಾರ ಇರ್ತದೆಯೆ?' ಅಂತ ಮಾರ್ಮಿಕವಾಗಿ ಕೇಳಿದ್ದಕ್ಕೆ ಅವಳು ಮುಗ್ಧತೆಯಲ್ಲಿ '...ಪ್ಯಾಟಿಂದ ಬಾಟ್ಲಿ ತಗಂಡು ಮೋಟರುಸೈಕಲ್‌ಮೇಲೆ ಊರಿಗೆ ಬರವರು ನಮ್ಮಂಗಡೀಲಿ ಮಿರ್ಚಿಭಜಿ ಅಂಬಡೆ ಕಟ್ಟಿಸಕಂಡು ಹೋಗತಾರೆ. ರಾತ್ರಿನೇ ಜೋರು...' ಅಂದಳು. ಹೆಂಗಸರು ದುಸರಾ ಮಾತಾಡಲಿಲ್ಲ. ಅದೇ ಉರಿಯಲ್ಲಿ, 'ಅಂಗಡೀಲಿ ತೂಗುಬಿಟ್ಟ ಬಾಳೇಕೊನೆ ನಮ್ಮವರ ತೋಟದಲ್ಲಿ ಕದ್ದದ್ದೇ; ಮತ್ತೆಲ್ಲಿಂದ ಬರತದೆ? ಕದ್ದ ಅಡಕೆ ವಹಿವಾಟೂ ನಡೀತಿರಬಹುದು. ಗಂಡಸರೆಲ್ಲ ತೂಕಡಿಸ್ತಿದ್ದರೆ ಮತ್ತೇನು!' ಅಂದರು. 'ಹೀಗೇ ಬಿಟ್ರೆ ಅಕ್ರಾಂ ಮತ್ತೆ ಆ ಸಾವಕ್ಕ ನಮ್ಮೂರ ಹುಡುಗರಿಗೆ ಮಂಚ ಸಪಲಾಯಿ ಮಾಡತಾರೆ ನೋಡಿ...' ಅಂತ ನಾಕುಜನ ಸೇರಿದಲ್ಲಿ ನಾಲಗೆ ಹರಿಬಿಟ್ಟರು. ಅದು ವಿಸ್ತಾರವೂ ವಿಕಾರವೂ ಆಗುತ್ತ ಹೋಯಿತು. 'ಥು! ಏನು ಹೆಂಗಸರಪ... ಪಾಪ, ಅವಳಿಗೆ ಹಿಂದಿಲ್ಲ ಮುಂದಿಲ್ಲ. ಶ್ರಮಮಾಡಿ ಹೊಟ್ಟೆಗಷ್ಟು ದುಡಕೊಂಡರೆ ನಿಮಗೆಂತಕೆ ಉರಿ?' ಮುಕುಂದರಾಯರು ಮನೆಯಲ್ಲಿ ಗದರಿಕೊಂಡರು.

'...ಹಿಂದಿಲ್ಲ ಮುಂದಿಲ್ಲ ಎಂತಕ್ಕೆ? ಇಲ್ಲಿ ಬರೋ ಮೊದಲು ಅಷ್ಟುಕಾಲ ಎಲ್ಲೊ ಇದ್ದಿರಲೆಬೇಕಲ್ಲ. ಹಾಡು ಹಸೆ ಎಲ್ಲ ಅಲ್ಲೆ ಕಲಿತಿದ್ದು ಹೌದಾ? ಸ್ವಂತದ ಭೂತಕಾಲದ್ದು ಏನೂ ಬಾಯೆ ಬಿಡದಿಲ್ಲ. ಸಂಶಯ ಬರದಿಲ್ವ?' ವಾದದಿಂದ ವಿಚಲಿತರಾಗಿ, '...ನೆನಪಿಸಿಕೊಂಡ್ರೇ ಜೀವ ನರಳುವಂತ ಭೂತಕಾಲವಾಗಿದ್ರೆ ಯಾರಿಗೆ ಹೇಳಿಕೊಳ್ಳಲು ಮನಸಾಗತದೆಯೆ? ಅಂತದೇನಾದ್ರು ಇದ್ರೆ ಸಾವಕ್ಕ ಅದನ್ನ ಹೂತುಹಾಕಲಿ ಬಿಡು; ತಿಳಿದುಕೊಂಡು ಏನುಪಯೋಗ? ನೀವೇನು ಮನೇಲಿ ಕೆಲಸ ಕೊಡತೀರ?' ಗಂಡನ ಮಾತಿಗೆ ಸಿಟ್ಟಾಗಿ, 'ಹೌದೌದು... ಕರೆತಂದುಬಿಡತೀರಿ!' ಅನ್ನುತ್ತ ಒಳಗೆ ಹೋದಳು.

ಗಂಡಸರು ಹೆಂಗಸರು ಅವರವರದೆ ಕಾರಣಕ್ಕೆ ಆತಂಕಕ್ಕೊಳಗಾಗುತ್ತ ಶಾಲಾಸಮಿತಿ ಮೀಟಿಂಗಿನಲ್ಲಿ ಸಾವಕ್ಕನನ್ನು ತೆಗೆದುಹಾಕುವುದಾಗಿ ಹೆದರಿಸಲೇಬೇಕಾಯಿತು. ಆದರೆ ಅವಳ, ತನಗೆ ಬೇರೇನಾದರೂ